ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/07/ಇಸಿಎಸ್(1)/2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳ,
ಅರಮನೆ ರಸ್ತೆ, ಬೆಂಗಳೂರು-1,
ದಿನಾಂಕ: 29-05-2018

## ಸುತ್ತೋಲೆ

ವಿಷಯ : 2018 ಮೇ/ಜೂನ್ ಡಿಪ್ಲೋಮ ಥಿಯರಿ ಪರೀಕ್ಷೆಯ ದಿ:28-05-2018 ರ ಪರೀಕ್ಷೆಗಳನ್ನು ಮರು ಮುಂದೂಡಿರುವ ಕುರಿತು

ಉಲ್ಲೇಖ : 1. ಮುಖ್ಯ ಚುನಾವಣಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,ಸಿ.ಆ.ಸು.ಇ(ಚುನಾವಣೆಗಳು) ಇವರ ಪತ್ರ ಸಂಖ್ಯೆ:ಸಿಆಸುಇ 01 ಚುರಘೋ 2018 ದಿನಾಂಕ:26-05-2018

2. ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ 07/ಇಸಿಎಸ್(1)2017 ದಿ:26-05-2018.

3. ಮಾನ್ಯ ಉಪಸಭಾ ಪತಿ, ಕರ್ನಾಟಕ ವಿಧಾನ ಪರಿಷತ್ತು, ಇವರ ಪತ್ರ ಸಂಖ್ಯೆ:ಕವಿಪ:ಉಪ:829:2018 ದಿನಾಂಕ:26-05-2018

***********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ಚುನಾವಣೆ (ಮೇ 2018ರ ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ) ಯು ದಿನಾಂಕ:28-05-2018 ರಂದು ಜರುಗಲಿದ್ದ ಕಾರಣ ರಾಜ್ಯಾದ್ಯಂತ ಪರೀಕ್ಷಾ ಕೇಂದ್ರಗಳಲ್ಲಿ ಸದರಿ ದಿನಾಂಕದಂದು ನಡೆಯಬೇಕಾಗಿದ್ದ ಥಿಯರಿ ಪರೀಕ್ಷೆಗಳನ್ನು ಉಲ್ಲೇಖ (2) ರ ಸುತ್ತೋಲೆಯನ್ವಯ ದಿನಾಂಕ:08-06-2018ಕ್ಕೆ ಮುಂದೂಡಲಾಗಿತ್ತು.

***ಆದರೆ ಉಲ್ಲೇಖ(1) ಹಾಗೂ (3) ರ ಮುಖ್ಯ ಚುನಾವಣಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,ಸಿ.ಆ.ಸು.ಇ(ಚುನಾವಣೆಗಳು) ಹಾಗೂ ಮಾನ್ಯ ಉಪ ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು, ಇವರ ಪತ್ರದಲ್ಲಿ ದಿನಾಂಕ:08-06-2018 ರಂದು ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರ, ನೈಋತ್ಯ ಶಿಕ್ಷಕರ ಕ್ಷೇತ್ರ, ನೈರುತ್ಯ ಪದವೀಧರ ಕ್ಷೇತ್ರ, ಬೆಂಗಳೂರು ಪದವೀಧರ ಕ್ಷೇತ್ರ, ಆಗ್ನೇಯ ಶಿಕ್ಷಕರ ಹಾಗೂ ಈಶಾನ್ಯ ಪದವೀಧರ ಕ್ಷೇತ್ರಗಳಿಗೆ ಚುನಾವಣೆಗಳು ನಡೆಯಲಿದ್ದು, ಶಿಕ್ಷಕರ/ ಪದವೀಧರ ಕ್ಷೇತ್ರಗಳ ಮತದಾರರಾಗಿರುವ ಉಪನ್ಯಾಸಕರು ಮತ ಚಲಾಯಿಸಲು ಅನುಕೂಲವಾಗುವಂತೆ ಸದರಿ ದಿನದ ಡಿಪ್ಲೋಮ ಪರೀಕ್ಷೆಗಳನ್ನು ಮುಂದೂಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ದಿನಾಂಕ:08-06-2018 ಕ್ಕೆ ಮುಂದೂಡಲಾಗಿದ್ದ ಪರೀಕ್ಷೆಗಳನ್ನು ದಿನಾಂಕ:09-06-2018 ಕ್ಕೆ ಮತ್ತೊಮ್ಮ ಮುಂದೂಡಲಾಗಿದೆ.*** ಪರೀಕ್ಷಾ ವೇಳೆಯಲ್ಲಿ ಬದಲಾವಣೆಗಳಿರುವುದಿಲ್ಲ, ಇನ್ನುಳಿದಂತೆ ಬೇರೆ ಯಾವುದೇ ಬದಲಾವಣೆಗಳಿರುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಈ ವಿಷಯವನ್ನು ವಿದ್ಯಾರ್ಥಿಗಳು/ ಉಪನ್ಯಾಸಕರು/ ಪೋಷಕರ ಗಮನಕ್ಕೆ ತಪ್ಪದೇ ತರುವಂತೆ ಎಲ್ಲಾ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

ಇವರಿಗೆ: ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು/ ಉಪ ಮುಖ್ಯ ಅಧೀಕ್ಷಕರು/ ಮುಖ್ಯ ವೀಕ್ಷಕರು/ ಪ್ರಿನ್ಸಿಪಾಲರುಗಳಿಗೆ – ಮಾಹಿತಿಗಾಗಿ ಮತ್ತು ಪರೀಕ್ಷಾ ಕೊಠಡಿಗಳಲ್ಲಿ ಸುತ್ತೋಲಿಸಲು.

ಪ್ರತಿ:1) ಖಜಾನೆ ನಿರ್ದೇಶಕರು, ಕರ್ನಾಟಕ ಸರ್ಕಾರ, ಬೆಂಗಳೂರು

2) ಡೈರೆಕ್ಟರ್ ಜನರಲ್ ಆಫ್ ಪೋಲೀಸ್, ಬೆಂಗಳೂರು

3) ಪರೀಕ್ಷಾ ತನಿಖಾ ದಳಗಳ ಮುಖಂಡರುಗಳು – ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ

4) ಸಂಬಂಧಪಟ್ಟ ಉಪ/ಜಿಲ್ಲಾ ಖಜಾನಾಧಿಕಾರಿಗಳು – ಪ್ರಿನ್ಸಿಪಾಲರು/ಮುಖ್ಯ ಅಧೀಕ್ಷಕರ ಮೂಲಕ– ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ

5) ಸಂಬಂಧಪಟ್ಟ ಆರಕ್ಷಕ ಠಾಣಾಧಿಕಾರಿಗಳು – ಪ್ರಿನ್ಸಿಪಾಲರು/ಮುಖ್ಯ ಅಧೀಕ್ಷಕರ ಮೂಲಕ – ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ

6) ನಿರ್ದೇಶಕರ ಆಪ್ತ ಶಾಖೆ

7) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ.

8) ಇ-ಗವರ್ನೆನ್ಸ್ ವಿಭಾಗ – ವೆಬ್ ಸೈಟ್‌ನಲ್ಲಿ ಪ್ರಕಟಿಸಲು

9) ಗಣಕ ಕೇಂದ್ರ – ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು

10) ಶ್ರೀ ಹರೀಶ್ ಶೆಟ್ಟಿ, ಆ.ಶ್ರೇ.ಉ. ಸ.ಮ.ಪಾ॥ ಮಂಗಳೂರು – ಅಗತ್ಯ ಕ್ರಮಕೈಗೊಳ್ಳಲು

11) ಕಾರ್ಯದರ್ಶಿಯವರ ಆಪ್ತ ಶಾಖೆ